SD
18/3/2

# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : 1306 |
| ಸದಸ್ಯರ ಹೆಸರು | : ಶ್ರೀ ಎಸ್.ರವಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | : 18-03-2020 |
| ಉತ್ತರಿಸುವ ಸಚಿವರು | : ಕಂದಾಯ ಸಚಿವರು |

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಮನಗರ-ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿನ ತಾಲ್ಲೂಕುವಾರು ಭೂ ಪರಿವರ್ತನೆಗಾಗಿ ONLINE ನಲ್ಲಿ ಒಟ್ಟು ಸ್ವೀಕರಿಸಿರುವ ಅರ್ಜಿಗಳೆಷ್ಟು; ಇವುಗಳಲ್ಲಿ ವಿಲೇವಾರಿಯಾದ ಅರ್ಜಿಗಳು, ತಿರಸ್ಕೃತವಾದ ಅರ್ಜಿಗಳು, ಬಾಕಿ ಇರುವ ಅರ್ಜಿಗಳು ಎಷ್ಟು;</td><td>ರಾಮನಗರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಭೂ ಪರಿವರ್ತನೆಗಾಗಿ ಆನ್‌ಲೈನ್ ಮೂಲಕ ಸ್ವೀಕೃತವಾಗಿರುವ ಅರ್ಜಿಗಳ ವಿವರಗಳು ಈ ಕೆಳಕಂಡಂತಿವೆ:-
<table>
<tr><th colspan="6">ರಾಮನಗರ ಜಿಲ್ಲೆ</th></tr>
<tr><th rowspan="2">ಕ್ರ.ಸಂ.</th><th rowspan="2">ತಾಲ್ಲೂಕು</th><th rowspan="2">ಸ್ವೀಕೃತ ಅರ್ಜಿಗಳು</th><th colspan="2">ವಿಲೇವಾರಿಯಾದ ಅರ್ಜಿಗಳು</th><th rowspan="2">ಬಾಕಿ ಅರ್ಜಿಗಳು</th></tr>
<tr><th>ಮಂಜೂರಾತಿಯಾದ ಅರ್ಜಿಗಳು</th><th>ತಿರಸ್ಕೃತ ಅರ್ಜಿಗಳು</th></tr>
<tr><td>1.</td><td>ರಾಮನಗರ</td><td>785</td><td>269</td><td>437</td><td>79</td></tr>
<tr><td>2.</td><td>ಚನ್ನಪಟ್ಟಣ</td><td>220</td><td>55</td><td>131</td><td>34</td></tr>
<tr><td>3.</td><td>ಮಾಗಡಿ</td><td>176</td><td>58</td><td>91</td><td>27</td></tr>
<tr><td>4.</td><td>ಕನಕಪುರ</td><td>709</td><td>318</td><td>252</td><td>139</td></tr>
<tr><td colspan="2">ಒಟ್ಟು</td><td>1890</td><td>700</td><td>911</td><td>279</td></tr>
<tr><th colspan="6">ಬೆಂಗಳೂರು ಗ್ರಾಮಾಂತರ ಜಿಲ್ಲೆ</th></tr>
<tr><td>1.</td><td>ನೆಲಮಂಗಲ</td><td>555</td><td>397</td><td>158</td><td>0</td></tr>
<tr><td>2.</td><td>ದೊಡ್ಡಬಳ್ಳಾಪುರ</td><td>345</td><td>218</td><td>127</td><td>0</td></tr>
<tr><td>3.</td><td>ದೇವನಹಳ್ಳಿ</td><td>536</td><td>323</td><td>213</td><td>0</td></tr>
<tr><td>4.</td><td>ಹೊಸಕೋಟೆ</td><td>783</td><td>511</td><td>272</td><td>0</td></tr>
<tr><td colspan="2">ಒಟ್ಟು</td><td>2219</td><td>1449</td><td>770</td><td>0</td></tr>
</table></td></tr>
<tr><td>ಆ)</td><td>ಯಾವ ಉದ್ದೇಶಕ್ಕೆ ಅರ್ಜಿಗಳನ್ನು ತಿರಸ್ಕರಿಸಲಾಗಿದೆ; ಹಾಗೆಯೇ ಬಾಕಿ ಉಳಿಯಲು ಕಾರಣಗಳೇನು; ಯಾವ ಉದ್ದೇಶಕ್ಕಾಗಿ ಯಾವ ಹಂತದ ಅಧಿಕಾರಿಗಳ ಬಳಿ ತಿರಸ್ಕೃತ ಮತ್ತು ಬಾಕಿ ಅರ್ಜಿಗಳು ಉಳಿದಿವೆ? (ಸಂಪೂರ್ಣ ಮಾಹಿತಿ ನೀಡುವುದು)</td><td>ಸಂಬಂಧಪಟ್ಟ ಸ್ಥಳೀಯ ಯೋಜನಾ ಪ್ರಾಧಿಕಾರಗಳ ಅಭಿಪ್ರಾಯದ ಮೇರೆಗೆ ಅರ್ಜಿಗಳನ್ನು ತಿರಸ್ಕರಿಸಲಾಗುತ್ತದೆ. Karnataka Town and Country Planning Act. 1961 ರನ್ವಯ ಸ್ಥಳೀಯ ಯೋಜನಾ ಪ್ರಾಧಿಕಾರಗಳು ಸಿದ್ಧಪಡಿಸುವ ಮಹಾಯೋಜನೆಯಂತೆ ಭೂ ಪರಿವರ್ತನೆ ಕೋರಿರುವ ಜಮೀನು ಯಾವ ಉದ್ದೇಶಕ್ಕಾಗಿ ಭೂ ಪರಿವರ್ತನೆ ಕೋರಲಾಗಿರುತ್ತದೆಯೋ ಅಂತಹ ಉದ್ದೇಶದ ವಲಯದಲ್ಲಿ ಇಲ್ಲದಿದ್ದಾಗ ಹಾಗೂ ಪ್ರಸ್ತಾಪಿತ ಜಮೀನು ಯಾವುದಾದರೂ ಉದ್ದೇಶಕ್ಕೆ ಭೂಸ್ವಾಧೀನಕ್ಕೆ ಒಳಪಟ್ಟಿದ್ದಾಗ ಅಥವಾ ಅರಣ್ಯ ಜಮೀನಾಗಿದ್ದಲ್ಲಿ ಹಾಗೂ ಪ್ರಸ್ತಾಪಿತ ಜಮೀನಿಗೆ ಸಂಬಂಧಿಸಿದಂತೆ ಯಾವುದಾದರೂ ನ್ಯಾಯಾಲಯದಲ್ಲಿ ಪ್ರಕರಣ ಬಾಕಿ ಇದ್ದರೆ ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುತ್ತದೆ.<br><br>ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 67 ಎಲ್‌ಜಿಪಿ 2018, ದಿನಾಂಕ: 20/02/2019ರಲ್ಲಿ ಸಂಬಂಧಪಟ್ಟ ಇಲಾಖೆ / ಪ್ರಾಧಿಕಾರಿಗಳಿಂದ ತಿಂಗಳ ಕಾಲಮಿತಿಯೊಳಗೆ ಅಭಿಪ್ರಾಯ / ವರದಿ ಬಾರದಿದ್ದಲ್ಲಿ ಭೂಪರಿವರ್ತನೆ ಕೋರಿಕೆ ಬಗ್ಗೆ ಅವರಿಂದ ಯಾವುದೇ ರೀತಿಯ ಆಕ್ಷೇಪಣೆ ಇಲ್ಲವೆಂದು ಪರಿಗಣಿಸಿ, ಕೂಡಲೇ ಭೂ ಪರಿವರ್ತನೆಗೆ ಮುಂದಿನ ಕ್ರಮ ವಹಿಸತಕ್ಕದ್ದು ಎಂದು ನಿರ್ದೇಶಿಸಿರುವಂತೆ 30 ದಿನಗಳ ನಂತರ ಸಂಬಂಧಪಟ್ಟ ಇಲಾಖೆ / ಪ್ರಾಧಿಕಾರದಿಂದ ಸ್ವೀಕೃತಗೊಂಡ ವರದಿಯ ಆಧಾರದ ಮೇರೆಗೆ ಭೂಪರಿವರ್ತನೆಗೆ ಕ್ರಮವಹಿಸಲಾಗುತ್ತಿದೆ.</td></tr>
</table>

ರಾಮನಗರ ಜಿಲ್ಲೆಯಲ್ಲಿ ಪ್ರಸ್ತುತ ಬಾಕಿಯಿರುವ 2[illegible]9 ಅರ್ಜಿಗಳು 30 ದಿನಗಳ ಅವಧಿಯೊಳಗಿನ ಅರ್ಜಿಗಳಾಗಿವೆ. ಸದರಿ ಅರ್ಜಿಗಳಿಗೆ ಸಂಬಂಧಿಸಿದಂತೆ ಅಭಿಪ್ರಾಯಕ್ಕಾಗಿ ಸಂಬಂಧಪಟ್ಟ ಇಲಾಖೆ / ಪ್ರಾಧಿಕಾರಗಳಿಗೆ ಆನ್‌ಲೈನ್ ಮೂಲಕ ವರ್ಗಾಯಿಸಲಾಗಿದ್ದು, ನಿಗದಿತ 30 ದಿನಗಳೊಳಗಾಗಿ ಅಭಿಪ್ರಾಯ ಸ್ವೀಕೃತವಾಗದಿದ್ದಲ್ಲಿ ಸದರಿ ಇಲಾಖೆ / ಪ್ರಾಧಿಕಾರದಿಂದ ಯಾವುದೇ ಆಕ್ಷೇಪಣೆ ಇಲ್ಲವೆಂದು ಪರಿಗಣಿಸಿ, ಭೂ ಪರಿವರ್ತನೆಗೆ ಸಂಬಂಧಿಸಿದಂತೆ ನಿಯಮಾನುಸಾರ ಕ್ರಮವಹಿಸಲಾಗುವುದು.

ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಫೆಬ್ರವರಿ 2020ರ ಅಂತ್ಯಕ್ಕೆ ಯಾವುದೇ ಅರ್ಜಿಗಳು ಬಾಕಿ ಇರುವುದಿಲ್ಲ.

**ಸಂಖ್ಯೆ: ಆರ್‌ಡಿ 57 ಎಲ್‌ಜಿಕ್ಯೂ 2020**

(ಆರ್.ಅಶೋಕ)
ಕಂದಾಯ ಸಚಿವರು